

# ಚಕ್ರ ಮತ್ತು ರೇಖೆ

## ಶಿಲುಬೆಯ ಮೂಲಕ ಬಿಡುಗಡೆಗೆ ಮಾರ್ಗದರ್ಶನ

ಡಾಕ್ಟರ್. ಚಾಲ್ಸ್ . ಆರ್. ಸೊಲೊಮೊನ

ನೀವು ಇದನ್ನು ಓದುವಾಗ ನಿರಾಶೆ ಮತ್ತು ಅಶಾಂತತೆಯ ಮಧ್ಯದಲ್ಲಿ ಇರಬಹುದು. ಜನರಿಂದ ನೀವು ಕೈ ಬಿಡಲ್ಪಟ್ಟಿರಬಹುದೆಂದು ನಿಮಗೆ ಅನ್ನಿಸುತ್ತಿರಬಹುದು ಮತ್ತು ದೇವರು ಕೂಡ ನಿಮಗೆ ದೂರದ ಸಹಾಯಕನಾಗಿ ಕಾಣುತ್ತಿರಬಹುದು. ನೀವು ಪ್ರೀತಿಯಿಂದ ವಂಚಿತರಾಗಿ ಬೆಳೆದಿರಬಹುದು ಮತ್ತು ನಿಮ್ಮನ್ನು ನೀವೇ ಒಬ್ಬ ವ್ಯಕ್ತಿಯಾಗಿ ಸ್ವೀಕರಿಸಲು ಅಥವಾ ಪ್ರೀತಿಸಲು ನೀವು ಅಸಮರ್ಥರಾಗಿರಬಹುದು.

ಬಹುಶಃ ನೀವು ಜೀವನದೊಂದಿಗೆ ಹೋರಾಡಲು ಕೊರತೆಯುಳ್ಳವ-ರಾಗಿದ್ದೀರೆಂದು ನೆನೆಸುತ್ತಿರಬಹುದು ಮತ್ತು ಕೆಲವು ಚಿಂತೆಗಳ ಮೆಟ್ಟಿಲು ಅಥವಾ ಆತ್ಮಹತ್ಯೆಯ ಆಲೋಚನೆಯಿಂದ ಕಷ್ಟಪಡುತ್ತಿರಬಹುದು. ನಿಮ್ಮ ಪ್ರಿಯರೊಂದಿಗೆ ನಿಮ್ಮ ಸಂಬಂಧಗಳು ಮುರಿದು ಹೋಗುವ ಹಂತಕ್ಕೆ ಬಂದು ಮುಟ್ಟಿದೆಯೋ? ಒಂದು ವೇಳೆ ಹಾಗಿದ್ದರೆ ಇಗೋ ಇಲ್ಲಿದೆ ನಿಮ್ಮ ಎಲ್ಲಾ ಅಗತ್ಯತೆಗಳಿಗೆ ಸೂಕ್ತವಾದ ಸಂಧಿಸುವ ಒಂದು ಸಂದೇಶ.

ದೇವರು ನಿನ್ನನ್ನು ಬಹಳವಾಗಿ ಪ್ರೀತಿಸುತ್ತಾನೆ ಆದ್ದರಿಂದ ಆತನು ತನ್ನ ಸ್ವಂತ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ನಿನ್ನ ಪಾಪಗಳಿಗಾಗಿ ಶಿಲುಬೆಯ ಮೇಲೆ ಸಾಯುವುದಕ್ಕೆ ಈ ಲೋಕಕ್ಕೆ ಕಳಿಸಿದನು. ನಿನಗೆ ಜೀವವನ್ನು ಕೊಡಲು ಮರಣದಿಂದ ಪುನಃ ಯೇಸು ಎದ್ದನು. ನೀನು ನಂಬಿಕೆ ಇಟ್ಟರೆ ಆ ಜೀವವನ್ನು ನಿನಗೆ ಅನುಗ್ರಹಿಸುವನು. ನೀನು ಒಂದು ಜಯಶಾಲಿಯಾದ ಸಮೃದ್ಧಿಯಾದ ಮತ್ತು ಆನಂದಭರಿತ ಜೀವವನ್ನು ನಡೆಸಲು ಸಹಾಯಮಾಡುವುದಕ್ಕಾಗಿ ಈ ಕ್ರಿಸ್ತನ ಜೀವವೊಂದೇ ಸಾಕು.

ನೀವು ಒಂದು ವೇಳೆ ಇನ್ನೂ ಈ ಸತ್ಯವನ್ನು ಅನುಭವಿಸಿಲ್ಲವಾದರೆ ಪ್ರಭು ಯೇಸುಕ್ರಿಸ್ತನನ್ನು ನೀವು ಅಂಗೀಕರಿಸುತ್ತಿದ್ದಂತೆಯೇ ವಿವರಣೆಯಾದ ರೇಖಾ ಚಿತ್ರಗಳಿಂದ ಕೂಡಿದ ಈ ಸರಳವಾದ ಸಂದೇಶವು ನಿಮ್ಮ ಜೀವವನ್ನು ಬದಲಾಯಿಸಬಲ್ಲದು. ಒಂದು ವೇಳೆ ನೀವು ಈಗಾಗಲೇ ನಿಮ್ಮ ರಕ್ಷಣೆಗಾಗಿ ಯೇಸುಕ್ರಿಸ್ತನನ್ನು ನಂಬಿದ್ದಿರಬಹುದು ಆದರೆ ಈಗ ಪ್ರಯಾಸ ಪಡುತ್ತಿರುವ ಬಿದ್ದುಹೋದ ವಿಶ್ವಾಸಿ ನೀವಾಗಿದ್ದೀರಿ. ನೀವು ಪ್ರಭು ಯೇಸುಕ್ರಿಸ್ತನನ್ನು ನಿಮ್ಮೊಳಗೆ ಪೂರ್ಣವಾಗಿ ಜೀವಿಸಲು ಅವಕಾಶ ಕೊಡುವಾಗ ಈಗ ತಿಳಿಸುವ ಸಂದೇಶವೇ ನಿಮ್ಮ ಜೀವಿತವನ್ನು ರೂಪಾಂತರಗೊಳಿಸುತ್ತದೆ.

ದಯವಿಟ್ಟು ಈ ಕೆಳಗಿನ ಪುಟಗಳನ್ನು ಎಚ್ಚರವಾಗಿ ಪ್ರಾರ್ಥನಾ ಪೂರ್ವಕವಾಗಿ ಅಭ್ಯಾಸಿಸಿ ಆಗ ದೇವರು ಖಂಡಿತವಾಗಿ ನಿಮಗೆ ಈ ಸತ್ಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವನು. ನಿಮ್ಮ ಬಳಿ ಸತ್ಯವೇದ ಇರುವುದಾದರೆ ದಯವಿಟ್ಟು ಗತ್ಯವಿರುವಯಾವುದಾದರು





ವಾಕ್ಯದ ಉಲ್ಲೇಖನಕ್ಕಾಗಿ ಅದನ್ನು ನಿಮ್ಮ ಬಳಿ ತೆರೆದು ಸಿದ್ಧವಾಗಿಟ್ಟುಕೊಳ್ಳಿ.

## ನಿಮ್ಮ ಯೋಜನೆ

ಸತ್ಯವೇದವು ಮನುಷ್ಯನನ್ನು ಮೂರು ಭಾಗಗಳಾಗಿ ವಿಂಗಡಿಸುತ್ತದೆ ಅವು ಆತ್ಮ, ಪ್ರಾಣ, ಶರೀರ,[1] ಚಕ್ರ ರೇಖಾ ಚಿತ್ರ ನಮಗೆ ಆತ್ಮ, ಪ್ರಾಣ, ಶರೀರ ಇವುಗಳ ನಡುವಿನ ಪರಸ್ಪರ ಸಂಬಂಧವನ್ನು ತಿಳಿಯಲು ಮತ್ತು ಕೇಂದ್ರವು ಹೇಗೆ ಮನುಷ್ಯನ ಜೀವನಕ್ಕೆ ಪ್ರಭಾವ ಎಂಬುದನ್ನು ತಿಳಿಯಲು ಸಹಾಯಕಾರಿಯಾಗಿದೆ.

ಶರೀರದ ಜ್ಞಾನೇಂದ್ರಿಯಗಳ ಮುಖಾಂತರ ಸುತ್ತಮುತ್ತಲಿನ ಪರಿಸರದೊಂದಿಗೆ ನಾವು ಸಂಬಂಧ ಕಲ್ಪಿಸುತ್ತೇವೆ. ಪ್ರಾಣ ಅಥವಾ ವ್ಯಕ್ತಿತ್ವ ಮನಸ್ಸು ಭಾವನೆಗಳು ಮತ್ತು ಚಿತ್ತದ ಕಾರ್ಯಗಳಿಗೆ ತುಂಬಿರುವಂಥದ್ದಾಗಿದೆ.ಪ್ರಾಣವು ಪರಸ್ಪರ ಒಂದಕ್ಕೊಂದು ಸಂಬಂಧ ಕಲ್ಪಿಸಲು ನಮ್ಮನ್ನು ಸಮರ್ಥರನ್ನಾಗಿ ಮಾಡುತ್ತದೆ. ಆತ್ಮವು ನಮಗೆ ಆತ್ಮೀಕ ನಮಗೆ ಆತ್ಮೀಕ ವಲಯಗಳಿಗೆ ಸಂಬಂಧ ಕಲ್ಪಿಸಲು ಸಹಾಯಮಾಡುತ್ತದೆ ಯಾವಾಗ ನಾವು ಹೊಸದಾಗಿ ಹುಟ್ಟುತ್ತೇವೋ ಮತ್ತು ಪವಿತ್ರಾತ್ಮನು ನಮ್ಮ ಹೃದಯದಲ್ಲಿ ವಾಸಿಸುತ್ತಾನೋ, ಆಗ ಆತನು ನಮ್ಮ ಸಾಮರ್ಥ್ಯ, ಮಿತಿ, ಪರಿಸ್ಥಿತಿಗಳಿಗಿಂತಲೂ ಮೇಲೇರಲು ನಮ್ಮನ್ನು ಬಲಪಡಿಸುತ್ತಾನೆ.

ಮನುಷ್ಯನ ಆತ್ಮವು ಆದಾಮನಿಗೆ (ಸೈತಾನನ ಕುಟುಂಬ) ಇಲ್ಲವೇ ಕ್ರಿಸ್ತನಿಗೆ (ದೇವರ ಕುಟುಂಬಕ್ಕೆ) ಸಂಬಂಧ ಪಟ್ಟಿರುತ್ತದೆ. ನಾವು ಈ ಲೋಕದೊಳಗೆ ಆದಾಮನ ಪುತ್ರರಂತೆ ಜನಿಸಿದ್ದೇವೆ. ರೇಖಾಚಿತ್ರದ ತರ್ಣರೇಖೆಯ ಮೇಲಿರುವ ಅಡ್ಡ ಗೆರೆಯ ಗುರುತುಗಳು ಆದಾಮನಿಂದ ಪ್ರಾರಂಭವಾಗುವ ನಮ್ಮ ಪೂರ್ವಿಕರ ಸಂತ್ಯತ್ತಿಗಳನ್ನು ಸೂಚಿಸುತ್ತದೆ ಮತ್ತು ನಮ್ಮ ಜೀವನಗಳು ಮುರಿದುಹೋಗದಿರುವ ಒಂದು ಸರಪಳಿಯಂತೆ ಆತನಿಗೆ ಹಿಂದಿರುಗುತ್ತವೆ.

ಆದ್ದರಿಂದ ಆದಾಮನಿಗೆ ಏನೆಲ್ಲಾ ಸಂಭವಿಸಿತೋ, ಅದೆಲ್ಲ ನಮ್ಮ ಪೂರ್ವಜರ ಮೂಲಕ ನಮಗೂ ಸಂಭವಿಸಿತು. ಯಾವಾಗ ಆತನು ಪಾಪ ಮಾಡಿದನೋ, ನಾವು ಪಾಪಿಗಳಾದೆವು. ಯಾವಾಗ ಆತನು ಆತ್ಮೀಕವಾಗಿ ಮರಣ ಹೊಂದಿದನೋ, ನಾವು ಮರಣಹೊಂದಿದೆವು. ಯಾವ ರೀತಿ ಒಂದು ವೇಳೆ ನಮ್ಮ ಮುತ್ತಾತನು ಮಕ್ಕಳಿಲ್ಲದೇ ಸತ್ತು ಹೋದರೋ ನಾವು ಅವರೊಂದಿಗೆ ಸತ್ತು ಹೋದ ಹಾಗೆ.

ಆದ್ದರಿಂದ ಆತ್ಮೀಕ ಮರಣವು ದೇವರಿಂದ ನಮ್ಮನ್ನು ಅಗಲಿಸಿದ ನಿಮಿತ್ತ ನಾವೆಲ್ಲರೂ ಆತ್ಮೀಕವಾಗಿ ಮರಣಹೊಂದಿದವರಾಗಿ ಜನಿಸಿದೆವು. ನಾವು ಈ ಲೋಕದಲ್ಲಿ ದೈಹಿಕವಾಗಿ ಜನ್ಮ ತಾಳುವುದಕ್ಕಿಂತ ಮುಂಚೆಯೇ ಪಾಪಿಗಳಾಗಿದ್ದೆವು. ಹೀಗಿರುವಾಗ, ನಾವು ಪಾಪಮಾಡುವಾಗ,[2] ನಮ್ಮೊಳಗಿಂದ ಸಹಜವಾಗಿ ಹೊರಗೆ ಬರುವುದನ್ನು ನಾವು ಮಾಡುತ್ತೇವೆ. ಆದಾಮನೊಳಗೆ ಉಳಿಯುವ ಪ್ರತಿಯೊಂದು ಜೀವವು ರೇಖಾಚಿತ್ರದಲ್ಲಿ ತೋರಿಸಿದಂತೆ ಕಟ್ಟಕಡೆಗೆ ನರಕದಲ್ಲಿ ಕೊನೆಗೊಳ್ಳುತ್ತದೆ.[3] ನಾವು ಎಷ್ಟೋ ಒಳ್ಳೆಯ ಜೀವಿತವನ್ನು ಜೀವಿಸಿರಬಹುದು. ಆತ್ಮೀಕ ಜನನದಿಂದ ಮಾನವ ಮಾದರಿಯ ಪ್ರಕಾರ ಆತನ ಕುಟುಂಬದಲ್ಲಿ ಜನಿಸದೆ ಹೊರತು ಮತ್ತು ಜನಿಸುವವರೆಗೂ ನಾವು ದೇವರಿಂದ ಬೇರ್ಪಡಿಸಲ್ಪಟ್ಟಿದ್ದೇವೆ. (ದೇವರ ದೃಷ್ಟಿಯಲ್ಲಿ ಸತ್ತು ಹೋಗಿದ್ದೇವೆ.)

## ನಿಮ್ಮ ಅಗತ್ಯತೆಗಳು

ಚಕ್ರ ರೇಖಾ ಚಿತ್ರದಲ್ಲಿ ರಕ್ಷಣೆ[4] ಎಂಬ ಪದದ ಅರ್ಥ ಆತ್ಮೀಕ ಜನನ. ಕೇವಲ ನಾವು ರಕ್ಷಣೆಯ ಮೂಲಕ ಆದಾಮನ ಜೀವಿತವನ್ನು ತ್ಯಜಿಸಬಲ್ಲೆವು ಮತ್ತು ರೇಖಾಚಿತ್ರದಲ್ಲಿ ಸೂಚಿಸಿದಂತೆ ಕ್ರಿಸ್ತನ[5] ಜೀವನದಲ್ಲಿ ಹುಟ್ಟುವುದು, ನಿತ್ಯಜೀವವಾಗಿದೆ.

ಆತ್ಮೀಕವಾಗಿ ಹುಟ್ಟಬೇಕಾದರೆ, ಮೊದಲು ನಾವು 'ಗುರುತಿಸ' ಬೇಕಾಗಿರುವ ಮತ್ತು 'ಒಪ್ಪಿಕೊಳ್ಳ' ಬೇಕಾಗಿರುವುದೇನೆಂದರೇ, ನಾವು ನಮ್ಮ ಪೂರ್ವಜರ ದಾರಿಯಲ್ಲೇ ನಮ್ಮ ಜೀವಿತವನ್ನು ಜೀವಿಸುತ್ತಿರುವುದರಿಂದ, ನಾವು ಹುಟ್ಟಿನಿಂದಲೇ ಪಾಪಿಗಳು ಮತ್ತು ಪಾಪಿಗಳಾಗಿರುವುದರಿಂದ ನಾವು ಪಾಪವನ್ನು ಮಾಡಿದ್ದೇವೆ. ನಾವು ಕ್ರಿಸ್ತನನ್ನು ನಮ್ಮ ಜೀವನದಲ್ಲಿ ಅಂಗೀಕರಿಸಬೇಕು. ಯಾಕೆಂದರೆ ಆತನು ನಮ್ಮ ಪಾಪಗಳಿಗಾಗಿ ದಂಡನೆಯನ್ನು ತೆರಲು ನಮ್ಮ ಬದಲಾಗಿ ಮರಣ ಹೊಂದಿದ್ದನು ಮತ್ತು ತನ್ನ ಜೀವವನ್ನು ನಮಗೆ ಕೊಡಲು ಎದ್ದು ಬಂದನು.

---

1. 1 ಥೆಸಲೋನಿಕದವರಿಗೆ 5:23 - ಶಾಂತಿ ದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ. ನಮ್ಮ ಕರ್ತನಾದ ಯೇಸುಕ್ರಿಸ್ತನು ಪ್ರತ್ಯಕ್ಷವಾಗಿ ನಿಮ್ಮ ಆತ್ಮ, ಪ್ರಾಣ, ಶರೀರಗಳು ದೋಷವಿಲ್ಲದೆ, ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ.
2. ರೋಮಾಪುರದವರಿಗೆ ಬರೆದ ಪತ್ರಿಕೆ 3 :23 – ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ.
3. ರೋಮಾಪುರದವರಿಗೆ 6: 23 – ಯಾಕೆಂದರೆ ಪಾಪವು ಕೊಡುವ ಸಂಬಳ ಮರಣ ದೇವರು ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ.
4. ಯೇಸುವಿನಲ್ಲಿರುವ ನಿತ್ಯಜೀವ. ಚಕ್ರರೇಖಾ ಚಿತ್ರದ ಅತ್ಯಭಾಗದಲ್ಲಿರುವ 1ನೇ ಅಂಶ.
5. ಯೋಹಾನನ ಸುವಾರ್ತೆ 3: 3 – ಅದಕ್ಕೆ ಯೇಸು – ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು ಅಂದನು.

ಒಪ್ಪಿಗೆ[10] ಪಡೆಯಲು ಒತ್ತಾಯಿಸಲ್ಪಟ್ಟಿದ್ದೇವೆ. ಆದರೆ ಜೀವಿತದಿಂದ ಪ್ರತಿಯೊಂದು ವಿಶ್ವಾಸಿಯನ್ನು ದೇವರು ಅಂಗೀಕರಿಸಿದ್ದರೂ,[11] ಅವರು ದೇವರ ಒಪ್ಪಿಗೆಯನ್ನು ಪಡೆಯಲೇಬೇಕೆಂಬ ಭಾವನೆ ಅವರಿಗಿರುತ್ತದೆ. ಮತ್ತು ಬಹಳ ಜನ ನಂಬಿಕೆಯಿಂದ ಹೊಂದಬಹುದಾದ ಈ ನೀತಿಯುತೆಯನ್ನು ಮತ್ತು[12] ಅಂಗೀಕರಣವನ್ನು ಒಪ್ಪಿಕೊಳ್ಳದೆ ಹೋಗುತ್ತಾರೆ.

ಒಬ್ಬ ವಿಶ್ವಾಸಿ ಯಾರು ದೇವರಿಂದ ರಕ್ಷಣೆ, ಭರವಸೆ, ಭದ್ರತೆ ಮತ್ತು ಅಂಗೀಕಾರಗಳನ್ನು ಹೊಂದಿರುತ್ತಾನೋ ಆತನ ಸ್ವಾಭಾವಿಕ ಪ್ರತಿಕ್ರೀಯೆ ಅದು ದೇವರಿಗೆ ತನ್ನನ್ನು 'ಸಂಪೂರ್ಣವಾಗಿ ಒಪ್ಪಿಸಿಕೊಳ್ಳುವಿಕೆ'[13, 14] ಯಾಗಿರುತ್ತದೆ, ಯಾವುದು ತನ್ನ ಜೀವಿತವನ್ನು ಆಳಲು ಕೃಪೆಯುಳ್ಳ ದೇವರ ಕೈಗೆ ಸಂಪೂರ್ಣವಾಗಿ ಒಪ್ಪಿಸಿಕೊಡುವಂತದ್ದಾಗಿದೆಯೋ ಅದೇ. ಇದೆಂದರೆ ಆತನು ಏನನ್ನೇ ಆಗಲಿ ನಮ್ಮೊಳಗೆ ನಮ್ಮೊಂದಿಗೆ, ನಮಗಾಗಿ ಮತ್ತು ನಮ್ಮ ಮೂಲಕ ತನ್ನ ಕಾರ್ಯನಡೆಸಲು ನಮ್ಮ ಅನುಮತಿಯನ್ನು ಕೊಟ್ಟಹಾಗೆ ಚುಟುಕಾಗಿ ಹೇಳುವುದಾದರೆ, ನಾವು ನಮ್ಮೆಲ್ಲಾ ಹಕ್ಕುಗಳನ್ನು ಆತನಲ್ಲಿ ಬಿಟ್ಟುಕೊಡುವುದಾಗಿದೆ ಆದರೆ ಅನೇಕ ವಿಶ್ವಾಸಿಗಳು ತಮ್ಮ ಸ್ವಂತ ಆಸೆ ಮತ್ತು ಯೋಜನೆಗಳಂತೆ ಜೀವಿಸುವ ಸಲುವಾಗಿ ತಮ್ಮ ಜೀವಿತವನ್ನು ಸಂಪೂರ್ಣವಾಗಿ ಪ್ರಭು ಯೇಸುಕ್ರಿಸ್ತನಿಗೆ ಒಪ್ಪಿಸಿಕೊಡುವುದಿಲ್ಲ. ದೇವರ ಅಧಿಕಾರವು (ಆಳ್ವಿಕೆಯಲಿ) ಕಷ್ಟಕರವಾದದ್ದೆಂದು ಅವರು ಭಯಪಡುತ್ತಾರೆ ಮತ್ತು ದೇವರು ಅವರ ಸ್ವಾತಂತ್ರ್ಯ ಹಾಗೂ ಸಂತೋಷವನ್ನು ಮಿತಿಗೊಳಿಸಲು ಬಯಸುತ್ತಾನೆಂದು ಆ ವಿಶ್ವಾಸಿಗಳು ತಿಳಿಯುತ್ತಾರೆ. ಯಾರು ತಮ್ಮ ಜೀವಿತವನ್ನು ಕ್ರಿಸ್ತನ ಅಧೀನಕ್ಕೆ ಒಪ್ಪಿಸುವುದಿಲ್ಲವೋ ಅವರು ತಮ್ಮ

10. ಎಫೆಸದವರಿಗೆ 1:6 – ಆತನು ತನ್ನ ಕೃಪೆಯನ್ನು ಪ್ರಶಂಸೆಗೆ ತರಬೇಕೆಂದು ನಮ್ಮನ್ನು ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವುದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪಮಾಡಿದ್ದನು. ಈ ಕೃಪಾದಾನವು ಆತನ ಪ್ರಿಯನಲ್ಲಿಯೇ ನಮಗೆ ದೊರೆಯಿತು.
11. ಚಿಕ್ಕ ರೇಖಾಚಿತ್ರದ ಪಕ್ಕ ಭಾಗದಲ್ಲಿರುವ 4ನೇ ಅಂಶ.
12. 2ಕೊರಿಂಥ 5:21 – ನಾವು ಆತನಲ್ಲಿ ದೇವರಿಗೆ ಸಮರ್ಪಕವಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗಿ ಮಾಡಿದನು.
13. ಚಿಕ್ಕ ರೇಖಾಚಿತ್ರದ ಪಕ್ಕ ಭಾಗದಲ್ಲಿರುವ 5ನೇ ಅಂಶ.
14. ರೋಮಾಪುರದವರಿಗೆ 12:1 – ಆದುದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವುದೇನಂದರೆ ನೀವು ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ, ಮೆಚ್ಚಿಕೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ ಇದೇ ನಿಮ್ಮ ಆರಾಧನೆಯು ವಿವೇಕಪೂರ್ವಕವಾದ.



ಸ್ವಾರ್ಥದಲ್ಲಿ ಜೀವಿಸಿದಂತೆ ಸ್ವಾರ್ಥ ಜೀವನವು ಎಂದೂ ತೃಪ್ತಿಯನ್ನು ಕೊಡುವುದಿಲ್ಲ.

ದೇವರಿಗೆ ನಮ್ಮ ಜೀವಿತದ ಅಧಿಕಾ ರವನ್ನು ತೆಗೆದುಕೊಳ್ಳಲು ಆತನನ್ನು ವಿನಂತಿಸಿಕೊಳ್ಳುತ್ತಿರುವ ಹಾಗೆಯೇ, ನಾವು ನೆನೆಸದ ಕೆಲವು ಘಟನೆಗಳು ಸಂಭವಿಸುತ್ತವೆ. ಆಗಾಗ್ಗೆ, ಸಂದರ್ಭಗಳು ನಮ್ಮ ವಿರುದ್ಧವಾಗಿ ಬಂದು ಗೊಂದಲಗಳನ್ನು ಉಂಟುಮಾಡುತ್ತವೆ. ಯಾಕೆಂದರೆ ನಮ್ಮ ಜೀವಿತದ ಮೇಲಿರುವ ನಮ್ಮ ಹತೋಟಿಯನ್ನು ಕೊನೆಮಾಡಲು ಬಯಸುತ್ತಾನೆ. ಯಾವಾಗ ದೇವರು ಅಧಿಕಾರವನ್ನು ತೆಗೆದುಕೊಳ್ಳುತ್ತಾನೋ, ಆಗ ನಮ್ಮ ಮೇಲಿನ

ಸ್ವ – ಹತೋಟಿಯನ್ನು ನಾವು ಕಳೆದುಕೊಳ್ಳುತ್ತೇವೆ. ಈ ಕಾರ್ಯದಲ್ಲಿ ದೇವರು ಉಪಯೋಗಿಸುವ ವ್ಯಕ್ತಿಗಳು ಅಥವಾ ಸನ್ನಿವೇಶಗಳು ಆಕ್ಸೀಕವಾಗಿರುವದಿಲ್ಲ. ಅವು ನಾವು ಬಯಸದ ಕಷ್ಟಗಳನ್ನು ನಮ್ಮ ಮೇಲೆ ಸುರಿಸಬಹುದು. ಆದರೆ ಈ ಕಷ್ಟಗಳು ದೇವರ ಉದ್ದೇಶಗಳನ್ನು ನಮ್ಮ ಜೀವಿತದಲ್ಲಿ ಪೂರೈಸುತ್ತವೆ.[15] ಕಷ್ಟದ ಸಮಯದಲ್ಲಿ ಅಥವಾ ತಿದ್ದುಪಾಟು[16] ಮಾಡುವ ಸಮಯದಲ್ಲಿ ಸಂತೋಷಪಡುವದು ನಮಗೆ ಅಷ್ಟು ಸುಲಭವಲ್ಲ. ಆದರೆ ನಾವು ಬಯಸುವ ಶುದ್ಧತೆಯನ್ನು ತಯಾರಿಸುವ ಕುಲುಮೆ ಇದಾಗಿದೆ.

15. 1ನೇ ಪೇತ್ರ 2:20 -21 – ತಪ್ಪುಮಾಡಿ ಗುದ್ದುತಿನ್ನುವುದರಲ್ಲಿ ನೀವು ತಾಳ್ಮೆಯಿದ್ದರೆ ಅದರಿಂದೇನು ಕೀರ್ತಿ? ಆದರೆ ಒಳ್ಳೇದನ್ನು ಮಾಡಿ ಬಾಧೆಪಡುವುದರಲ್ಲಿ ನೀವು ತಾಳ್ಮೆಯಿದ್ದರೆ ಅದು ದೇವರ ಮುಂದೆ ಶ್ಲಾಘ್ಯವಾಗಿದೆ ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿದ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು ಆದರೆ ಯಾವ ಪಾಪವನ್ನು ಮಾಡಲಿಲ್ಲ.
ಫಿಲಿಪ್ಪಿ 1- 23, 30 – ಈ ಎರಡರ ನಡುವೆ ಸಿಕ್ಕಿಕೊಂಡಿದ್ದೇನೆ ಇಲ್ಲಿಂದ ಹೋಗಿಬಿಟ್ಟು ಕ್ರಿಸ್ತನ ಜೊತೆಯಲ್ಲಿರಬೇಕೆಂಬುದೇ ನನ್ನ ಅಭಿಲಾಷೆ, ಅದು ಉತ್ತಮೋತ್ತಮ.... ಹೇಗಂದರೆ ಕ್ರಿಸ್ತನ ಮೇಲೆ ನಂಬಿಕೆಯಿಡುವದೂ ಆತನಿಗೋಸ್ಕರ ಬಾಧೆಯನ್ನನುಭವಿಸುವದೂ ನಿಮಗೆ ಅನುಗ್ರಹವಾಗಿ ದೊರೆಯಿತು. ಹೀಗೆ ನೀವು ನನ್ನಲ್ಲಿ ಕಂಡಂಥ ಮತ್ತು ಈಗ ನನ್ನಲ್ಲಿರುವುದಾಗಿ ಕೇಳುವಂಥ ಅದೇ ಹೋರಾಟವು ನಿಮಗುಂಟು.
16. ಫಿಲಿಪ್ಪಿಯವರಿಗೆ 3: 10 – ಆತನನ್ನೂ ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನೂ ಆತನ ಬಾಧೆಗಳಲ್ಲಿ ಪಾಲುಗಾರನಾಗಿರುವ ಪದವಿಯನ್ನೂ ತಿಳಿದುಕೊಂಡು ಆತನ ಮರಣದ ವಿಷಯದಲ್ಲಿ ಆತನಿಗೆ ಸರೂಪನಾಗಬೇಕೆಂಬುದೇ ನನ್ನ ಕುತೂಹಲವಾಗಿದೆ.
ಇಬ್ರಿಯರಿಗೆ 12 : 11 – ಯಾವ ಶಿಕ್ಷೆಯಾದರೂ ತತ್ಕಾಲಕ್ಕೆ ಸಂತೋಷಕರವಾಗಿ ತೋರದೆ ದುಃಖಕರವಾಗಿ ತೋರುತ್ತದೆ; ಆದರೂ ತರುವಾಯ ಅದು ಶಿಕ್ಷೆಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟುಮಾಡುತ್ತದೆ.

ಸಮಾಜ ಅಥವಾ ಕ್ರೈಸ್ತ ಸಮಾಜವು ಹೊಗಳುತ್ತದೆ ಮತ್ತು ಗೌರವಿಸುತ್ತದೋ ಆಗ ಆದರೆ ಈ ರೀತಿಯಾದ ಕ್ರಮಗಳಿಂದ ಉಂಟಾಗುವ ಜಗಳಗಳು ಕಷ್ಟ ಮತ್ತು ಸೋಲಿನೆಡೆ ನಮ್ಮನ್ನು ನಡೆಸುತ್ತವೆ.

ಆದ್ದರಿಂದ ಈ 'ಶರೀರ'ವು ಕ್ರೈಸ್ತರಿಗೆ – ಮೂರ್ತಿ ಪೂಜೆಯಷ್ಟೇ ಗಂಭಿರವಾದ ಸಮಸ್ಯೆಯಾಗಿದೆ. ಕ್ರಿಸ್ತನ ಹೊರತು, ಏನೇ ಆದರೂ – ನಾವೂ ಸಹ ಮೂರ್ತಿಗಳೇ, ಈ ಕಾರಣದಿಂದ ದೇವರು ಶರೀರದೊಂದಿಗೆ ದೃಢವಾಗಿ ಕಾರ್ಯಮಾಡುತ್ತಾನೆ ಮತ್ತು ವಿಶ್ವಾಸಿಗೆ ಪರಿಸ್ಥಿತಿಗಳೊಂದಿಗೆ ಹೋರಾಡಲು ತನ್ನ ಸ್ವಾರ್ಥ – ಮಗ್ನ ಜೀವಿತವು ಹೇಗೆ ವ್ಯರ್ಥ ಎಂಬುದನ್ನು ತಿಳಿಸುತ್ತಾನೆ. ಹೀಗೆ ವಿಶ್ವಾಸಿಯು ತನ್ನ ಪರಿಸ್ಥಿತಿಗಳು ಸಹಿಸಲಸಾಧ್ಯವೆಂದು ಯಾವಾಗ ತಿಳುದುಕೊಳ್ಳತ್ತಾನೇ, ಅತನು ತನ್ನ ಮೇಲಿನ ವಿಶ್ವಾಸವನ್ನು ಬಿಟ್ಟುಬಿಡುತ್ತಾನೆ, ಮತ್ತು ತನ್ನ ಸ್ವಾರ್ಥ– ಜೀವನವನ್ನು ಕ್ರಿಸ್ತ – ಜೀವಿತವಾಗಿ ಮಾರ್ಪಡಿಸಲು ಆಸಕ್ತಿಯುಳ್ಳವನಾಗುತ್ತಾನೆ.

ಎಲ್ಲಿಯುವರೆಗೂ ಸ್ವಾರ್ಥ (ದೇಹ) ವು ಅಧಿಕಾರದಲ್ಲಿರುತ್ತದೋ, ಚಕ್ರರೇಖಾ ಚಿತ್ರದಲ್ಲಿರುವ "ಆತ್ಮ" (ವ್ಯಕ್ತಿ ಪ್ರಭಾವ) ಭಾಗದಲ್ಲಿ ತೋರಿಸಿರುವ ಕಲಹಗಳು ಮುಂದುವರಿಯುವವು. ಅವುಗಳು ಆಯುಷ್ಯ ಮತ್ತು ಹೆಚ್ಚುತ್ತಿರುವ ಜವಾಬ್ದಾರಿಕೆಗಳೊಂದಿಗೆ ಹೆಚ್ಚು ಕೆಟ್ಟದಾಗಬಹುದು. ಅನಿಯಮಿತವಾಗಿ ಮಾನಸಿಕವಾಗಿ ಚೆನ್ನಾಗಿ ಹೊಂದಿಕೊಂಡಂತೆ ಒಂದು ಸ್ವಾರ್ಥ ಜೀವನವು ಜೀವನದ ಬಹಳ ಸಂದರ್ಭದಲ್ಲಿ ಪರಿಸ್ಥಿತಿಗಳೊಂದಿಗೆ ಹೋರಾಡಲು ಸಮರ್ಥನಾಗಬಹುದು, ಆದರೆ ಫಲಿತಾಂಶಗಳು ನೆರವೇರುವುದಿಲ್ಲ "ಆತ್ಮ"ದಲ್ಲಿ ತೋರಿಸಿದ ಮಾನಸಿಕ ಸಮಸ್ಯೆಗಳು ಸ್ವಾರ್ಥ – ಜೀವನದ ಪರಿಣಾಮಗಳಾಗಿವೆ.

ಮಾನಸಿಕ ನ್ಯೂನತೆಗಳು, ಅಪರಾಧದೊಂದಿಗೆ (ವಾಸ್ತವವಾದ ಮತ್ತು ಯೋಚಿಸಿದ ಇವೆರಡೂ), ಆಶಾಭಂಗ ಮೆಟ್ಟಿಲುಗಳನ್ನು ಸ್ವ – ಹಿಡಿತದಲ್ಲಿರುವ ಜೀವನದಲ್ಲಿ ಹುಟ್ಟಿಸುತ್ತದೆ. ಜನರು ಈ ಆಶಾಭಂಗವನ್ನು ಅನೇಕ ವಿಧವಾದ ರೀತಿಯಲ್ಲಿ ಪ್ರತಿಪಾದಿಸುತ್ತಾರೆ. ಕೆಲವರು ಇದನ್ನು ಶಾರೀರಿಕವಾಗಿ ಅಥವಾ ಮಾತಿನಿಂದ ಬೈಯುವುದರ ಮೂಲಕ ಇತರರ ಮೇಲೆ ಹೊರಿಸುತ್ತಾರೆ (ಹೊರಗೆ ತೋರಿಸಲ್ಪಡುವ ಶತ್ರುಭಾವ) ಇನ್ನೂ ಕೆಲವರು ಕೋಪ, ಶತ್ರುಭಾವ ಮತ್ತು ಆಶಾಭಂಗ ತಮಗೆ ಸಾಧ್ಯವಾದಷ್ಟು ಮಟ್ಟಿಗೆ ಅಡಗಿಸಿಡುತ್ತಾರೆ ಯಾಕೆಂದರೆ ಅವರು ಪ್ರತೀಕಾರಕ್ಕೆ ಭಯಪಡುತ್ತಾರೆ. ಅಥವಾ ತಾವು ಎದುರಿಸುವ ಪ್ರತಿಯೊಂದು



# ರೇಖಾ




ಸಮಸ್ಯೆಗೆ ತಮ್ಮನ್ನು ತಾವೇ ಸಂಧಿಸುವ ಭಯವಿರುತ್ತದೆ. ಆದರೆ ಯಾವಾಗ ಶತ್ರುಭಾವ ಮತ್ತು ಆಶಾಭಂಗಗಳು ಅಡಗಿಸಲ್ಪಡುತ್ತವೆಯೋ, ಆಗ ಅವು ಮನಸ್ಸು ಮತ್ತು ಭಾವನೆಗಳೆರಡಕ್ಕೂ ನಾಟುತ್ತವೆ. ಇನ್ನೂ ಕೆಲವರು ಶತ್ರುಭಾವ ಮತ್ತು ಕೋಪವನ್ನು ಅಡಗಿಸಿಕೊಳ್ಳುತ್ತಾರೆ ಇದು ಭಾವನೆಗಳನ್ನು ಕುಗ್ಗಿಸುವ ನಿರುತ್ಸಾಹ ಮತ್ತು (ಅಥವಾ) ಕಳವಳವನ್ನು

ಅಂತ್ಯವಿಲ್ಲದೇ ಸಾಗುವ ಮಾನಸಿಕ ಕಲಹಗಳು, ಚಿತ್ರದಲ್ಲಿ ತೋರಿಸಿದಂತೆ ಸಹಜವಾಗಿ ದೈಹಿಕ ಸಮಸ್ಯೆಗಳಿಂದ ಅಂತ್ಯಗೊಳ್ಳುತ್ತದೆ. ದೈಹಿಕ ವ್ಯಾಧಿಗಳು ನಿಜವೇ ಆಗಿದ್ದರೂ, ಅವು ಅಂತರಾಳದ ಸಮಸ್ಯೆಯ ಗುರುತುಗಳಾಗಿವೆ ಇದು ಸ್ವ –ಜೀವನ.

## ನಿಮ್ಮ ವಿಮೋಚನ

ಯಾವಾಗ ಒಬ್ಬನು ತನ್ನ ಸ್ವ –ಜೀವಿತವನ್ನು ತಳ್ಳಿಹಾಕುವ ಮೂಲಕ ದೇವರು ಮೂಲ ಸಮಸ್ಯೆಯನ್ನು ಬಗೆ ಹರಿಸುವನೆಂದು ನಂಬುತ್ತಾನೋ, ಆಗ ಈ ಮಾನಸಿಕ ಮತ್ತು ಶಾರೀರಿಕ ಗುರುತುಗಳು ಕಾಣೆಯಾಗಲು ಪ್ರಾರಂಭವಾಗುತ್ತವೆ.

ಈ ರೇಖಾಚಿತ್ರವು 'ಮರಣದಿಂದ ಜೀವ' ತತ್ವವನ್ನು ತೋರಿಸುತ್ತದೆ – ಇದು ಅಂತರಂಗದ ಕಲಹವನ್ನು ತೆಗೆದುಹಾಕುವ ದೇವರ ಮಾರ್ಗ

ಅಡ್ಡವಾದ ಗೆರೆಯು ನಿತ್ಯಜೀವವನ್ನು, ಕ್ರಿಸ್ತನ ಜೀವಿತವನ್ನು ಸೂಚಿಸುತ್ತದೆ. ''ನಿತ್ಯಜೀವ'' ಎನ್ನುವ ಶಬ್ದವು, ಸಮಯದ ಗಡಿಗಳ ಮಿತಿಮೀರುವಿಕೆಯನ್ನು ತೋರಿಸುತ್ತದೆ. ಕ್ರಿಸ್ತನು ದೇವರು ಆಗುವದರಿಂದ ಹಿಂದೆಯೂ ಜೀವಿಸಿದನು ಮತ್ತು ಮುಂದೆಯೂ ಎಂದೆಂದೂ ಜೀವಿಸುವನು. ಆತನ ಜೀವನವು ನೆನ್ನೆ, ಇಂದು ಮತ್ತು ಎಂದೆಂದಿಗೂ ಒಂದೇ ಆಗಿರುತ್ತದೆ.[19] ಎಡಗಡೆಯ ರೇಖೆಯಲ್ಲಿ ಚಿತ್ರಿಸಿದಂತೆ, ಕ್ರಿಸ್ತನು ಶರೀರಧಾರಿಯಾದನು[20] ಮತ್ತು ಮಾನವ ರೂಪದಲ್ಲಿ ಸುಮಾರು 33 ವರ್ಷಗಳ ಕಾಲ ಬದುಕಿದನು. ನಂತರ, ಆತನು ಶಿಲುಬೆಗೆ ಹಾಕಲ್ಪಟ್ಟನು ಮತ್ತು ಮೂರನೇ ದಿನ ಮರಣದಿಂದ[21] ಎದ್ದನು. ಆತನು ಇಂದಿಗೂ

19. ಇಬ್ರಿಯರಿಗೆ 13: 8 – ಯೇಸುಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತು ಇದ್ದಾನೆ, ನಿರಂತರವೂ ಹಾಗೆಯೇ ಇರುವನು.

20. ಯೋಹಾನ 1: 14 – ಆ ವಾಕ್ಯವೆಂಬುವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ, ಸತ್ಯದಿಂದಲೂ ತುಂಬಿದವನಾಗಿದ್ದನು.

21. 1ಕೊರಿಂಥದವರಿಗೆ 15: 3- 4 – ನಾನು ನಿಮಗೆ ತಿಳಿಸಿದ ಮೊದಲನೆಯ ಸಂಗತಿಗಳೊಳಗೆ ಒಂದು ಸಂಗತಿಯನ್ನು ನಿಮಗೆ ತಿಳಿಸಿಕೊಟ್ಟೆನು. ಅದು ನಾನು ಸಹ ಕಲಿತುಕೊಂಡದ್ದೇ. ಅದೇನಂದರೆ ಶಾಸ್ತ್ರದಲ್ಲಿ ಮುಂತಿಳಿಸಿದ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು ಹೂಣಲ್ಪಟ್ಟನು ಶಾಸ್ತ್ರದ ಪ್ರಕಾರವೇ ಮೂರನೇ ದಿನದಲ್ಲಿ ಎಬ್ಬಿಸಲ್ಪಟ್ಟನು.



ಜೀವಿಸುತ್ತಿದ್ದಾನೆ.[22] ಆದ್ದರಿಂದ ನಿತ್ಯಜೀವ (ಕ್ರಿಸ್ತ ಜೀವಿತ) ವೆಂದರೆ ಒಬ್ಬ ವಿಶ್ವಾಸಿಗೆ ಅದು ಕೇವಲ ವರ್ತಮಾನ ಮತ್ತು ಭವಿಷ್ಯತ್ತು ಎನ್ನುವ ಅರ್ಥ ಮಾತ್ರ ಕೊಡುವದಿಲ್ಲ, ಆದರೆ ಅದು ನಿತ್ಯ ಭೂತಕಾಲವನ್ನೂ ಸಹ ಒಳಗೊಂಡಿರುತ್ತದೆ.

ನಾವು ಹೊಸದಾಗಿ ಹುಟ್ಟುವವರೆಗೂ[23] ಕ್ರಿಸ್ತನ ನಿತ್ಯಜೀವನದಲ್ಲಿ ನಾವು ಸೇರಿದವರಾಗಿರುವುದಿಲ್ಲ. ನಾವು ಈ ಹಿಂದೆ ನೋಡಿರುವಂತೆ ಆತ್ಮೀಕವಾಗಿ ಮರಣ ಹೊಂದಿದ ಆದಾಮನ ಜೀವನಕ್ಕೆ ನಾವು ಸೇರಿದ್ದೇವೆ. ನಮಗೆ ನಮ್ಮ ಪಾಪಗಳಿಗಾಗಿ ಕೇವಲ ಕ್ಷಮೆ ಮಾತ್ರ ಅಗತ್ಯವಲ್ಲ, ಆದರೆ ಜೀವವೂ ಕೂಡ ಅವಶ್ಯವಾಗಿದೆ. ಪ್ರಭು ಯೇಸು ಕ್ರಿಸ್ತನು ಇವೆರಡನ್ನೂ ನಮಗೆ ಕೊಡುವದಕ್ಕಾಗಿ ಈ ಲೋಕಕ್ಕೆ ಬಂದನು – ನಮ್ಮ ಪಾಪಗಳಿಗಾಗಿ ಸಾಯುವದರಿಂದ ಮತ್ತು ಪುನರುತ್ಥಾನ ಜೀವವನ್ನು[24] ನಮಗೆ ಕೊಡುವದರಿಂದ. ನೀನು ಒಂದು ವೇಳೆ ಕ್ರೈಸ್ತನಾಗಿದ್ದರೆ, ಇಷ್ಟೆಲ್ಲವನ್ನು ನೀನೀಗಾಗಲೇ ತಿಳಿದಿರುತ್ತಿ. ನೀನಿನ್ನೂ ತಿಳಿಯದೇ ಇರುವ ವಿಷಯವು ಕೆಳಗೆ ಕೊಡಲ್ಪಟ್ಟದೆ.

ವಿಶ್ವಾಸಿಗೆ ದೈಹಿಕ ಮರಣವು ಈ ಪ್ರಾಪಂಚಿಕ ಜೀವನದಿಂದ ಸ್ವರ್ಗದ ಜೀವನಕ್ಕೆ ಹೋಗುವ ಹೆಬ್ಬಾಗಿಲ ದಾರಿಯಾಗಿದೆ, ಪಾಪದ ಸನ್ನಿಧಾನದಿಂದ ದೇವರ ಸನ್ನಿಧಿಗೆ ಹೋಗುವ ಮಾರ್ಗವಾಗಿದೆ. ಇದೇ ತೆರನಾದ ಇನ್ನೊಂದು ಮರಣವೂ ಇದೆ. ಒಬ್ಬ ವ್ಯಕ್ತಿಯು ಹೊಸದಾಗಿ ಹುಟ್ಟಿದಾಕ್ಷಣವೇ, ಅವನು ಆದಾಮನ ಜೀವನಕ್ಕೆ ಸತ್ತು ಹೋಗಿ ಕ್ರಿಸ್ತನ ನಿತ್ಯಜೀವದೊಳಗೆ ಹುಟ್ಟುವನು.

ಆದರೆ ಅದೇ ಎಲ್ಲವೂ ಅಲ್ಲ. ನಾವು ಆತನ ಜೀವನದಲ್ಲಿ ಕೂಡ ಪಾಲುದಾರರಾಗಿದ್ದೇವೆ – ಅಂದರೆ ನಿತ್ಯಜೀವ. ನಾವು ಕೇವಲ ಯೇಸುಕ್ರಿಸ್ತನಲ್ಲಿ (ಆತನ ಜೀವನ) ಮಾತ್ರ ದೀಕ್ಷಾಸ್ನಾನ ತೆಗೆದುಕೊಂಡಿಲ್ಲ

22. ಇಬ್ರಿಯರಿಗೆ 7: 25 – ಆದಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ ಅವರಿಗೋಸ್ಕರ ವಿಜ್ಞಾಪನೆಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ.

23. ಯೋಹಾನ 3:3 – ಅದಕ್ಕೆ ಯೇಸು ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ; ಅವನು ದೇವರ ರಾಜ್ಯವನ್ನು ಕಾಣಲಾರನು ಅಂದನು.

24. ಯೋಹಾನ 10:10 – ಕಳ್ಳನು ಕದ್ದುಕೊಳ್ಳುವದನ್ನು ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವುದಕ್ಕೂ ಬರುವುದಿಲ್ಲ; ನಾನಾದರೋ ಅವರಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು.

ಜೀವಿಸುವುದಕೋಸ್ಕರ ನನ್ನಯ ಪಾಪಗಳಿಂದ, ನನ್ನಯ ಮಾರ್ಗಗಳಿಂದ ತಿರುಗಿಕೊಳ್ಳುತ್ತೇನೆ. ನನ್ನನ್ನು ರಕ್ಷಿಸಿದುದಕ್ಕಾಗಿ ವಂದನೆಗಳು - ಆಮೆನ್

ನೀನು ಈ ರೀತಿಯಾಗಿ ರಕ್ಷಣೆಯ ಪ್ರಾರ್ಥನೆಯನ್ನು ಮಾಡಿದ್ದರೆ ನೀನು ಹುಟ್ಟಿದವನಾಗಿದ್ದೀ ಯಾರಾರು ಯೇಸುಕ್ರಿಸ್ತನಲ್ಲಿ ನಂಬಿಕೆ ಇಡುತ್ತಾರೋ ಅವರಿಗೆ ದೇವರ ಮಕ್ಕಳಾಗುವ ಪಕಾಶಕೊಡಲ್ಪಟ್ಟಿದೆ.[31]

### ಗುರುತಿಸಿಕೊಳ್ಳುವಿಕೆಯ ಪ್ರಾರ್ಥನೆ

ನೀನು ಈ ಸಮಯದಲ್ಲಿ ಅಥವಾ ಹಿಂದೆ ದಿನಗಳಲ್ಲಿ ರಕ್ಷಣೆಯ ಪ್ರಾರ್ಥನೆಯನ್ನು ಮಾಡಿದ್ದೀರಬಹುದು. ಈ ಗುರುತಿಸಿಕೊಳ್ಳುವಿಕೆಯ ಪ್ರಾರ್ಥನೆ, ಯೇಸುಕ್ರಿಸ್ತನ ಜಯಭರಿತ ಜೀವನ ಮತ್ತು ಶಾಂತಿಯನ್ನು ಅನುಭವಿಸಲು ಸಹಾಯಮಾಡುತ್ತದೆ. ಇದಕ್ಕಿಂತ ಮುಂಚಿತವಾಗಿ ಪರಿಣಾಮಕಾರಿಯಾಗಿ, ನಿನ್ನ ವೈಯಕ್ತಿಕ ಜೀವಿತವು ನಿಜವಾಗಿಯೂ ಅಸ್ವಸ್ಥತೆಯಿಂದ ಇರಬಹುದು. ನಿನ್ನ ಸ್ವಂತ ಶಕ್ತಿಯ ಮೂಲಕ ಕ್ರೈಸ್ತೀಯ ಜೀವಿತವನ್ನು ನಡೆಸುವುದಕೋಸ್ಕರ ಪವಿತ್ರಾತ್ಮನಿಂದ ಪಶ್ಚಾತ್ತಾಪ ನಿನಗೆ ಉಂಟಾಗಿರಬಹುದು. ನಿನ್ನಯ ಜೀವಿತದ ಮೇಲೆ ಆತನ ಹತೋಟಿಗೋಸ್ಕರ ನಿನ್ನನ್ನೇ ಬಿಟ್ಟುಕೊಡಲು ಸಿದ್ಧನಾಗಿರಬೇಕು.

ಈ ರೀತಿಯಾಗಿ ನಿನಗೆ ಅರಿವಾಗಿದ್ದರೆ, ಈ ರೀತಿಯಲ್ಲಿ ಪ್ರಾರ್ಥಿಸು

"ತಂದೆಯೇ, ನನ್ನಯ ಪಾಪವನ್ನು ಕ್ಷಮಿಸಿದಕ್ಕಾಗಿ ವಂದನೆಗಳು ಮತ್ತು ಆದಾಮನ ಜೀವಿತಕ್ಕೆ ಒಳಪಟ್ಟಿದಂತಹ ನನ್ನನ್ನು ಅದರಿಂದ ಹೊರ ತೆಗೆದುದಕ್ಕಾಗಿಯೂ ಮತ್ತು ಯೇಸು ಕ್ರಿಸ್ತನ ಜೀವಿತದಲ್ಲಿ ನನ್ನನ್ನು ಒಳಪಡಿಸಿದಕ್ಕಾಗಿಯೂ, ಮತ್ತು ಯೇಸು ಕ್ರಿಸ್ತನ ಜೀವಿತದಲ್ಲಿ ನನ್ನನ್ನು ಒಳಪಡಿಸಿರುವುದಕ್ಕಾಗಿಯೂ ವಂದನೆಗಳು. ಈಗ ನಾನು ಕ್ರಿಸ್ತನಲ್ಲಿದ್ದೇನೆ. ನಾನು ನಂಬುತ್ತೇನೆ ಆತನೊಟ್ಟಿಗೆ ಶಿಲುಬೆಗೆ ಹಾಕಲ್ಪಟ್ಟೆನು, ಆತನೊಟ್ಟಿಗೆ ಹೂಣಲ್ಪಟ್ಟೆನು, ಆತನೊಟ್ಟಿಗೆ ಪುನಃ ಎಬ್ಬಿಸಲ್ಪಟ್ಟು ಮತ್ತು ಆತನೊಂದಿಗೆ ನಿಮ್ಮಯ ಬಲಗಡೆಯಲ್ಲಿ ಕುಳಿತುಕೊಂಡಿದ್ದೇನೆ. ಈ ಸಮಯದಿಂದ ನಾನು ನಿನ್ನ ಮಗನಾಗಿರಲು ಆರಿಸಿಕೊಂಡೆನು. ಯೇಸುಕ್ರಿಸ್ತನೊಟ್ಟಿಗೆ ಸತ್ತವರು ಎಂದು ಮರೆಯದ ಹಾಗೆ ನನ್ನನ್ನು ಎಚ್ಚರಿಸುವುದಕ್ಕಾಗಿ ಪವಿತ್ರಾತ್ಮನ ಮೇಲೆ ಆಶ್ರಯಿಸಿಕೊಳ್ಳುತ್ತೇನೆ ಯಾಕೆಂದರೆ ನನ್ನಯ ಮಾನುಷಿಕವಾದ ಜ್ಞಾನದಿಂದ ಮತ್ತು ಶಕ್ತಿಯಿಂದ ನಿನಗಾಗಿ ಜೀವಿಸಲು ಪ್ರಯತ್ನಿಸುತ್ತೇನೆ. ನನ್ನ ಸಂಪೂರ್ಣ ಸೌಖ್ಯತೆಗಾಗಿ ಆರಿಸಿಕೊಂಡೆನು

31. ಯೋಹಾನ 1:12 - ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಲ್ಲಿ ನಂಬಿಕೆಯುಳ್ಳವರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು.



ಮತ್ತು ನಿನ್ನಲ್ಲಿಯೇ ನೀತಿವಂತನಾಗಿರಲು ನನ್ನಲ್ಲಿರುವ ಅಂಗಗಳನ್ನು ಪಾಪಮಾಡಲು ಅನುಮತಿಸುವುದಿಲ್ಲ. ಯೇಸುಕ್ರಿಸ್ತನಂತೆ ನನ್ನನ್ನು ಮಾಡಿರುವುದಕ್ಕೆ ಮತ್ತು ಆತನ ಜೀವಿತ ನಿಜವಾಗಲು ನನಗಾಗಿಯೇ ಎಂದು ಅರಿತಿದ್ದೇನೆ. ನನ್ನ ಮೂಲಕ ನೀನು ಮಹಿಮೆ ಹೊಂದಿಕೊ. ಯೇಸುಕ್ರಿಸ್ತನ ನಾಮದಲ್ಲಿ ನಾನು ಪ್ರಾರ್ಥಿಸುತ್ತೇನೆ. – ಆಮೆನ್.

ಇದು ಚಾರ್ಲ್ಸ್ ಆರ್.ಸೋಲೊಮೋನ್ ಎಡ್.ಡಿ ಬರೆದ "ಹ್ಯಾಂಡ್‌ಬುಕ್ ಟು ಹ್ಯಾಪಿನೆಸ್" ಎಂಬ ಪುಸ್ತಕದಿಂದ ಸಂಕ್ಷೇಪಿಸಲ್ಪಟ್ಟಿದೆ ಮತ್ತು ಗ್ರೇಸ್ ಕೌನ್ಸಿಲಿಂಗ್ ಇಂಡಿಯಾ ಸಂಸ್ಥೆಯಿಂದ ಪ್ರಕಾಶಿಸಲ್ಪಟ್ಟಿದೆ. ಸೊಲೊಮೋನರ ಇನ್ನಿತರ ಪುಸ್ತಕಗಳು "ಇನ್ಸ್ ಆ್ಯಂಡ್ ಔಟ್ ಆಫ್ ರಿಜೆಕ್ಷನ್", "ಕೌನ್ಸಿಲಿಂಗ್ ವಿಥ್‌ದ ಮೈಂಡ್ ಆಫ್ ಕ್ರೈಸ್ಟ್," "ಜೇಮ್ಸ್ ಆ್ಯಂಡ್ ಜಾರ್ಗನ್", "ದ ರಿಜೆಕ್ಷನ್ ಸಿಂಡ್ರೋಮ್."

## ಹೆಚ್ಚಿನ ವಿವರಗಳಿಗಾಗಿ

## GRACE COUNSELING INDIA

www.gracecounselor.org

P.O. Box 29
Muvattupuzha
Kerala - 686661
(Phone : 0485 2832488)
jzacgci@sancharnet.in

GCI Centre,
Gandhi Nagar P.O.,
Kottayam - 686008
(Phone : 0481 2595094)
gcindia@sancharnet.in